ಬಿಡಿ ಪ್ರತಿ ೩ ಪೈ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 1—8—0
ಒಂದು ವರ್ಷಕ್ಕೆ ಕಡಮೆ ಚಂದಾ ತೆಗೆದುಕೊಳ್ಳುವುದಿಲ್ಲ.
ವಿ. ಪಿ. ಪದ್ಧತಿ ಇಲ್ಲ.
ಪ್ರಕಟಣೆ ದಂವಸ್ತು ಬೇಕಾದವರಿಗೆ ತಿಳಿಸುತ್ತೆ.

Office—Chamaraja-Agrahar, Mysore
ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು

Regd. No. M. 1299.

SATYAVADI

"ಸತ್ಯವಾದಿ" ವಾರಪತ್ರಿಕ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು

"SATYAVADI"
OFFERS A
Profitable Medium
For Advertising
Space limited
Rates on enquiry

ಸಂಪುಟ ೭] ಮೈಸೂರು, ಶುಕ್ರವಾರ, ೧೦ ನೇ ಏಪ್ರಿಲ್ ೧೯೨೫. [ಸಂಚಿಕೆ ೧೬

ಗಿಂಂ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ
ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ ಸ್ವಪ್ನೇಂದ್ರಿಯವಾದರೂ ಸ್ತ್ರೀಸಂಗಕ್ಕೆ ಮೊದಲೆ ಸ್ಖಲನವಾದರು ಮೂತ್ರದೊಂದಿಗೆ ಹೊಗುತ್ತಿದ್ದರೂ, ದ್ರೋಷರ ಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು. ಅಜೀರ್ಣ, ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರಿ' ಎಂಬುವುದು ಕಾಬೂಲ್ ಇಂದಹಾರ್ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ

ಔಷಧದಿಂದ ಗುಣಹೊಂದಿದ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ, ಅಫ್ರಿಕ, ಬರ್ಮ, ಪೀನಾಂಗ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರುಬೇಕಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಿಸಿದವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟ್ ಮೂಲಕ ಅದನ್ನು ಪಡೆಯಬಹುದು. 1 ಡಬ್ಬಿಯನ್ನು 15 ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. 2 ಯಾ 3 ಡಬ್ಬಿಗಳು ಪೂರ್ಣವಾಗಿ ಗುಣವನ್ನುಂಟುಮಾಡುವುವು. ಅಸುಸಾಸ ಪತ್ರಿಕೆಯು ಡಬ್ಬಿ ಸಂಗಡಲೇ ಇರುತ್ತೆ. ಹೆಸರು ವಿಳಾಸ ಚೆನ್ನಾಗಿ ತಿಳಿಯುವಂತೆ ಇರಬೇಕು.

ಕ್ರಯ ಡಬ್ಬಿ 1 ಕ್ಕೆ ರೂ. 2—0—0
ಟಪ್ಪಾಲು ಖರ್ಚು 1 ರಿಂದ 3 ಡಬ್ಬಿಗಳಿಗೆ 8 ಆಣೆ. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ತಂತಿ ಅಡ್ರೆಸ್—ಮಿಸ್ರಿ, ಬೆಂಗಳೂರು ಸಿಟಿ.

ವಿಳಾಸ—ಡಿ. ಮನ್ನಾಲಾಲ್, ಜೆಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬಾ ಡಿಪೋ,
ಬೆಂಗಳೂರು ಸಿಟಿ.

ಸೀಮೆ ಭಂಗಾರದ ರೇಡಿಯಂ ರಿಸ್ಟ್‌ವಾಚ್



ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಕೂಸಡಾಗಿ ಬರಿದಿವೆ. ಈ ಗಡಿಯಾರದ ಕಾಂಪೊಸಿಷನ್‌ಗಳು ಬಹು ಒಳ್ಳೆಯವು. ಮತ್ತು ಬಲಿಷ್ಟವಾದವು. ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಒಂದು ವೇಳೆ ಹಿಂದು ಮುಂದು ಹೋದರೂ ತಾವೇ ಸರಿಮಾಡಿಕೊಳ್ಳಬಹುದು. ಈ ಗಡಿಯಾರಗಳು ಸ್ವಿಜ್ಜರ್‌ಲ್ಯಾಂಡು ದೇಶದಲ್ಲಿ ತಯಾರಾದುವು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು.

ಕ್ರಯ ಗಡಿಯಾರ 1 ಕ್ಕೆ ರೂ. 7—8—0
ಬೆಳ್ಳಿ ಗಡಿಯಾರ 1 ಕ್ಕೆ ರೂ. 9—0—0

ವಿಳಾಸ—ಗಾರಿ ಅಂಡ್ ಕೋ.,
ನಂ. 39 ಪರಮಾನಂದ ಮೊದಲಿ ಬೀದಿ.
ಮಿಂಟ್ ಪೋಸ್ಟ್, ಮದರಾಸ್.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಕಾಂಗಬತ್ತಿ' ಎಂಬ ದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದುಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬತ್ತಿ, ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಇದಲ್ಲದೆ ನಂಜನಗೂಡಿನ ಮಿ|| ಬಿ.ವಿ. ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಷರಬತ್ತುಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು.

ಸತ್ಯವಾದಿ ಪ್ರೆಸ್ ಮೈಸೂರು

—೦—

ನಾವು ಎಲ್ಲಾ ವಿಧವಾದ ಮುದ್ರಣ ಕೆಲಸವನ್ನೂ ಸುಲಭ ದರ್ಥದಿಂದಲೂ, ಸೊಗಸಾಗಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ.

MYSORE GOVERNMENT
LOAN BONDS
&
Shares of Prominent
Companies
BOUGHT & SOLD
For particulars apply to:—
THE SEMAH ELISHA COMPANY
MYSORE.

ಮೈಸೂರು ಸರ್ಕಾರಿ ಸಾಲದ ಪತ್ರ
ಮತ್ತು ಕಂಪನಿ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ
ಮತ್ತು
ಬಿಕರಿ ಮಾಡುತ್ತೇವೆ.

ಸೇವಾ ಇಲೈತಾ ಕಂಪನಿ ಮೈಸೂರು.

ಭಾರತ ಸರ್ವಸ್ವ

ಭರತಖಂಡದ ಪ್ರಖ್ಯಾತ ಕವಯಿತ್ರಿಯೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನಿ ದೇವಿಯರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುದರ ಕನ್ನಡ ಪರಿವರ್ತನೆ ಕ್ರಯ 1 ಆಣೆ ಒಂದೂವರಾಣೆಯ ಸ್ಟ್ಯಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

ವಿಳಾಸ—ಸತ್ಯವಾದಿ ಆಫೀಸ್ ಮೈಸೂರು.

ಕಲಾಮಂದಿರ್, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೇಯಿಂಟಿಂಗ್ ಎನ್‌ಲಾರ್ಜ್‌ಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರುಮಾಡುವೆವು. ಈ ಒಂದು ತಿಂಗಳವಧಿಗೆ 15-12 ಸೈಜು ಎನ್‌ಲಾರ್ಜ್‌ಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರುಪಾಯಿಗೆ ಮಾಡಿಕೊಡುವೆವು. ಫೋಟೋ ಮತ್ತು ಅರ್ಧ ಹಣ ರವಾನಿಸಿ.

EDITORS'S NOTE

Three or four weeks back, we had issued a circular stating that we had been incapacitated, on account of some unfortunate calamity, to issue our paper for a few weeks more.

If that mishappening had not occured, we had thought of not only issuing 'Satyavadi' as a Daily once again; but also launching a new English Weekly styled 'The National News' for conducting which the Government have granted us their kind permission.

For self-same reason, we are not in a position to issue the paper for a few weeks more from its own press In the interim the Proprietor of the Mysore Press has kindly consented to print and publish the paper for us for which we thank him.

ನೂತನ ಸಂವತ್ಸರದ ಫಲಗಳು.

—0—

ಮೊನ್ನೆ ಯುಗಾದಿಹಬ್ಬದ ದಿವಸ ವಿವಿಧ ಪಂಚಾಂಗಗಳು ಓದಲ್ಪಟ್ಟು ವರ್ಷದ ಫಲವು ಗ್ರಹಿಸಲ್ಪಟ್ಟಿತು. ನನ್ನ ಅನುಭವದಿಂದ ಫಲಗಳು ಈ ವಿಧವಾಗಿ ತೋರುತ್ತೆ

ಅಸತ್ಯ—100 ಭಾಗ; ಸತ್ಯ—ಏನೂ ಇಲ್ಲ; ಆತ್ಮ ಸ್ತುತಿ—98 ಭಾಗ; ಪರನಿಂದೆ—97 ಭಾಗ; ಇತರರ ನಿಂದೆಗೆ ಸಹನೆ—1 ಭಾಗ; ಕೋರ್ಟುಗಳಿಗೆ ಹತ್ತುವುದು—90 ಭಾಗ; ಪಂಚಾಯಿತರ ತೀರ್ಮಾನಕ್ಕೆ—9 ಭಾಗ; ಅಸಲಿಗೆ ಮೋಸವಿಲ್ಲದ್ದು—1 ಭಾಗ; ಕಾಫೀ ಹೋಟಲಿಗೆ ಹೋಗುವುದು—90 ಭಾಗ; ಹೋಗದೇ ಇರವುದು—4 ಭಾಗ; ಖಾದಿ ಬಟ್ಟೆ ಧರಿಸುವುದು—25 ಭಾಗ; ಉಪನ್ಯಾಸಕ್ಕೆ ಹೋಗುವುದು—94 ಭಾಗ; ಅದರಂತೆ ಆಚರಿಸತಕ್ಕವರು—2 ಭಾಗ; ಕೆಲಸಕ್ಕೆ ಅಲೆಯುವವರು—100 ಭಾಗ; ಸಿಕ್ಕುವುದು—(ಬ್ರಾಹ್ಮಣೇತರರಾದರೇನೇ) 1 ಭಾಗ; ಆರ್ಜನೆ—1 ಭಾಗ; ಖರ್ಚು ಮಾಡುವುದು—4 ಭಾಗ; ಬದುಕುವವಾರ್ಗ ತಿಳಿಯದೇ ಇರತಕ್ಕದ್ದು—92 ಭಾಗ; ಹಾಡುಗಾರಿಕೆ—100 ಭಾಗ; ಪರೀಕ್ಷೆಯಲ್ಲಿ 'ಪ್ಯಾಸ್'—20 ಭಾಗ; 'ಫೇಲ್' ಆಗುವುದು—80 ಭಾಗ.

ಪೇಟಿಧಾರಣೆ (ಇತರ ಪತ್ರಿಕೆಯಲ್ಲಿ ಬಿಟ್ಟಿರತಕ್ಕದ್ದು)

ಚಕ್ಕುಲಿ ಬೋಂಡ (ರೈಲು ಪ್ಲೇಟ್‌ಫಾರ್ಮ್‌ನಲ್ಲಿ) 3 ಕಾಸು, 'ಸೆಲೂಗಳಲ್ಲಿ' ಗಡ್ಡದ ಕ್ಷೌರಕ್ಕೆ ಮಾತ್ರ—2 ಆಣೆ; ಸ್ಕೂಲು ಫೈನಲ್ ವಿದ್ಯಾರ್ಥಿ ವಿವಾಹ ಒಪ್ಪಂದಕ್ಕಾದರೆ—116 ರೂಪಾಯಿ; ಕೆಲಸಕ್ಕಾದರೆ (ಯಾವುದಾದರೂ ದೊರಕಿದರೆ)—ತಿಂಗಳಿಗೆ 15 ರೂಪಾಯಿ; ಇಂಟರ್ ಮೀಡಿಯಟ್ ಕೆಲಸಕ್ಕಾದರೆ ತಿಂಗಳಿಗೆ 25 ರೂಪಾಯಿ; ಬಿ ಎ ವಿದ್ಯಾರ್ಥಿ ವಿವಾಹಕ್ಕಾದರೆ—1116 ರೂಪಾಯಿ; ಕೆಲಸಕ್ಕಾದರೆ—35 ರೂಪಾಯಿ; ಗುಮಾಸ್ತಾ—ತಿಂಗಳಿಗೆ 4—5 ರೂಪಾಯಿ; ಅಡಿಗೆ ಮಾಡುವವನಿಗೆ ತಿಂಗಳಿಗೆ 30—40 ರೂಪಾಯಿ; ಮಂತ್ರ ಹೇಳುವ ಬ್ರಾಹ್ಮಣರು—ಸಿಕ್ಕುವುದೇ ಕಷ್ಟ.

(ಅ.ಪ.) ಲೋಕಸಂಚಾರಿ

ವೃತ್ತಾಂತ ಸಂಗ್ರಹ

—

ಕೌನ್ಸಿಲಿನ ಮೊದಲನೆಯ ಮೆಂಬರಾದ, ಮುಷೀರ್-ಉಲ್-ಮುಲ್ಕ್ ಎಂ. ವೀರ್‌ಹುಸಾಮುದ್ದೀನ್ ಬಿ ಎ., ಬಿ. ಎಲ್., ರವರಿಗೆ 1925 ನೇ ಇಸ್ವಿ ಏಪ್ರಿಲ್ 4 ನೇ ತಾರೀಖಿನ ಲಾಗಾಯಿತು ನಾಲ್ಕು ತಿಂಗಳುಗಳ ಪ್ರಿವಿಲೇಜ್ ರಜವನ್ನು ಕೊಟ್ಟಿದೆಯೆಂದೂ ಸರ್ಕಾರಿ ಇಸ್ತಿಹಾರ್ನಾಮೆಯೊಂದರಿಂದ ತಿಳಿದುಬರುತ್ತದೆ.

ಸೇಟ್ ಲೋಕ್ ಬಾಂಡುಗಳನ್ನು ಪಡೆದಿರತಕ್ಕವರೆಲ್ಲರೂ ಸದರಿ ಬಾಂಡುಗಳ ಮೇಲೆ ಬಡ್ಡಿಯನ್ನು ಮೈಸೂರು ಬ್ಯಾಂಕಿನ ಎಲ್ಲಾ ಬ್ರಾಂಚುಗಳಲ್ಲಿಯೂ ಮತ್ತು ಏಜೆನ್ಸಿಗಳಲ್ಲಿಯೂ ಪಡೆಯುವಂತೆ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಸರ್ಕಾರದವರು ಹುಕುಂ ಸಾದರ್ಮಾಡಿರುತ್ತಾರೆ.

ಬೊಂಬಾಯಿನ ಪ್ರಸಿದ್ಧ ವಿಲ್ ಮಾಲೀಕರಾದ ವಿ||ವಾಡಿಯಾರವರು ಒಂದು ಹೆಚ್ಚಿಗೆ ಆಸ್ಪತ್ರೆ ಸ್ಥಾಪನೆಯ ಸಲುವಾಗಿ 16 ಲಕ್ಷ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿರುವರು. ಅಲ್ಲಿಯ ಮುನಿಸಿಪಾಲಿಟಿಯವರು ಈ ಉದ್ದೇಶ್ಯನೆರವೇರಲು ಅನುಕೂಲಿಸುವಂತೆ 20,000 ಚದುರಗಜದಷ್ಟು ಸ್ಥಳವನ್ನು ಕೊಡುವವರಾಗಿರುತ್ತಾರೆ.

ಮದರಾಸಿನಲ್ಲಿ ಕಳೆದ ೫ ನೇ ತಾರೀಖಿನ ದಿವಸ ವೈದೀಕ ಬ್ರಾಹ್ಮಣರ ಸಾಘವೊಂದು ಏರ್ಪಾಡಾಯಿತು.

ರಾಜ ಮಂತ್ರಧುರೀಣ ಎ. ಆರ್. ಬ್ಯಾನರ್ಜಿಯವರು ರಜದಿಂದ ಬಂದು ದಿವಾಣಗಿರಿಯನ್ನು ಪುನಃ ೪ ನೇ ತಾರೀಖಿನ ದಿವಸ ವಹಿಸಿರುವರು.

ಅಹವ್ವದಾಬಾದಿನ ಶರಾವಿನ ಪ್ರಕಾರ ಈ ವರ್ಷ ಅಖಿಲಭಾರತ ಖಾದೀ ಬೋರ್ಡಿನವರು ಅತ್ಯುತ್ತಮವಾದ ನೂಲನ್ನು ತೆಗೆದುದಕ್ಕಾಗಿ ರಾಜಪ್ರಾಹಿ ಡಿಸ್ಟ್ರಿಕ್ಟಿನ ಕುಂಡಿಯಾಪಾರದ ಶ್ರೀಯುತ ಅಸ್ಪೋಷ್ ಚಕ್ರವರ್ತಿಯವರ ಕುವರಿ ಕುಮಾರಿ ಅಪಾರನ ದೇವಿಯವರಿಗೆ ಒಂದು ಭಂಗಾರದ ಪದಕವನ್ನು ಕೊಟ್ಟಿರುತ್ತಾರೆ. ಇದನ್ನು ಮಹಾತ್ಮ ಗಾಂಧಿಯವರೂ ಸನ್ಮಾನಿಸಿ ಒಂದು ಪತ್ರ ಬರೆದಿದಾರೆ.

ಪೂನಾ ಸೆಂಟ್ರಲ್ ಪೋಸ್ಟಾಫೀಸಿನಲ್ಲಿ ೩೦೦೦ ರೂಪಾಯಿನ ಬೆಲೆಯ ಸ್ಟಾಂಪುಗಳು ಗೈರಾಬಿಲೆ ಬಂದಿರುವುದಾಗಿ ಪೋಲೀಸಿಗೆ ವರ್ತಮಾನ ಕೊಡಲ್ಪಟ್ಟಿದೆ. ಸ್ಟಾಂಪು ಲೆಟ್ಟು ಈಚೆಗೆ ತೆಗೆದಾಗ ಗೊತ್ತಾಗಿರುತ್ತೆ. ಈ ಹಣ ತಿಂದವರು ಯಾರೋ ಇನ್ನೂ

ಬೊಂಬಾಯಿನ ಬಾಲಾ ಖೂನಿ ಮೊಕದ್ದಮೆಯು ಅಲ್ಲಿನ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆ ಮಾಡಲ್ಪಟ್ಟು ಮುಂದಿನ ವಿಚಾರಣೆಗಾಗಿ ಹೈಕೋರ್ಟಿಗೆ ಕಳುಹಿಸಲ್ಪಟ್ಟಿದೆ. ಹತ್ತು ಜನ ಅಪರಾಧಿಗಳ ಪೈಕಿ ಒಬ್ಬನಾದ ಬಾವ್ಲಾರನರ ನೋಟಾರು ಪ್ರೈಸರ್ ಸರ್ಕಾರದ ಕಡೆ ಸಾಕ್ಷ್ಯ ನುಡಿಯಲು ತೆಗೆದುಕೊಳ್ಳಲ್ಪಟ್ಟಿದ್ದು ಇವನ ನುಡಿಯು ವಿರುದ್ಧವಾಗಿದ್ದುದರಿಂದ ಅವನನ್ನು ಪುನಃ ಅಪರಾಧಿಯೊಗಿ ವಿಚಾರಣೆ ಮಾಡಲ್ಪಟ್ಟ ಸೆಷನ್ಸಿಗೆ ಕಳುಹಿಸುವರು. ಈ ಮಧ್ಯೆ ಬೊಂಬಾಯಿನಲ್ಲಿ ವಿಚಾರಣೆ ನಡೆದರೆ ತಮಗೆ ಅನಾನುಕೂಲವೆಂದು ತಿಳಿದು ಅಪರಾಧಿಗಳು ತಮ್ಮ ಕಡೆ ವಕೀಲರಾದ ವಿ|| ವಿಲಿಂಕರನರ ಮೂಲಕ ಮೈಸಿರಾಯರನರನ್ನು ಮೊಖದ್ದಮೆಯನ್ನು ವರ್ಗಾಯಿಸಲು ಮನವಿಮಾಡಿಕೊಳ್ಳುವವರಾಗಿದ್ದಾರೆ. ಮಂತ್ರಿಜಾ ಬೇಗಂ ಮತ್ತು ಬೊಂಬಾಯಿ ಸರ್ಕಾರದವರು ಈ ವರ್ಗದ ಅರ್ಜಿಯನ್ನು ಪ್ರತಿಭಟಿಸುವವರಾಗಿರುತ್ತಾರೆ.

ಪ್ರಖ್ಯಾತ ಸಿನೆಮ ಫಿಲ್ಮ್ ಕಂಪೆನಿಯವರಾದ ಪೆತ್ಹಾನರ ಕಲ್ಕತ್ತಾ ಆಫೀಸಿಗೆ ತಾ। ೨೦ರಲ್ಲಿ ಬೆಂಕಿ ಬಿದ್ದಿದ್ದು ಸಾಮಾನುಗಳು ಜನರು ದಿಗಿಲ್ಗೊಂಡರು. ಕೆಲವು ನೆಗಳು ಉರಿಯುತ್ತಲೇ ಇದ್ದುವು. ಬೆಂಕಿ ನಂದಿಸಲಾದರೂ, ಬೆಂಕಿ ಹೇಗೆ ಉಂಟಾಯಿತೆಂದು ಹೇಳ ಬರುವುದಿಲ್ಲ. ಜನ ಹಾನಿಯಾಗಿಲ್ಲ

ದಿವಂಗತ ಸರ್ ಸೈನ್ಯಾಧಿಪತಿ ಲೋರ್ಡ್ ರೋಲಿನ್ಸರವರ ಕಳೇಬರವನ್ನು ಡಿಲ್ಲಿಯಿಂದ ಸ್ಪೆಶಲ್ ರೈಲಿನಲ್ಲಿ ಬೊಂಬಾಯಿಗೆ ತಂದು, ಅಲ್ಲಿ ಮೆರವಣಿಗೆಯಾಗಿ ಅದನ್ನು ಹಡಗಿನ ಮೇಲೆ ಇಂಗ್ಲೆಂಡಿಗೆ ಸಾಗಿಸಲಾಗಿದೆ ಶವಸಂಸ್ಕಾರವು ಅಲ್ಲಿಯಾಗುವುದು.

ಇಗ್ಲೆಂಡಿನ ಬೆಡ್ ಫರ್ಡ್‌ನ ಮೆಂಬರೇ ಪಾರ್ಲಮೆಂಟಿಗೆ "ಮನೀಲೆಂಡರ್ಸ್" ದೊಂದನ್ನು ತರುವನಿಗಿರುತ್ತಾನೆ. ಇದರಿಂದ ಸಾಲ ಕೊಡುವವನು ಜಾಹೀರಾತುಗಳ ಮೂಲ್ಕವಾಗಲೀ ಪ್ರಕಟನೆ ಪತ್ರಗಳ ಮೂಲ್ಕವಾಗಲೀ ಸಾಲ ಕೊಡದೆಂದೂ, ಹಾಗೆ ಮಾಡಿದಲ್ಲಿ ೩ ತಿಂಗಳ ಕಠಿಣಶಿಕ್ಷೆ ಅಥವಾ ೧೦೦ ಪೌಂ ಜುಲ್ಮಾನೆ ಅಥವಾ ಇವೆರಡಕ್ಕೂ ಅನುಭವಿಸಬೇಕೆಂದೂ, ಶೇಕಡ ೨೦ ಕ್ಕೆ ಹೆಚ್ಚಾಗಿ ಬಡ್ಡಿ ತೆಗೆದು ಕೊಂಡರೆ, ಅದು ಹೆಚ್ಚೆಂದು ಭಾವಿಸಲ್ಪಡಬೇಕೆಂದೂ ತಿಳಿಸುತ್ತೆ.

ಬೊಂಬಾಯಿನಲ್ಲಿ "ರಜನಾಕ್" ಹಡಗಿನ ಒಂದಿಳಿದ ಒಬ್ಬ ಪಠಾಣನ ಹತ್ತಿರ ೨೦ ಲೈಸೆನ್ಸಿಲ್ಲದ ಪಿಸ್ತೂಲುಗಳಿದ್ದುದರಿಂದ, ದಸ್ತಗಿರಿ ಮಾಡಲ್ಪಟ್ಟಿರುತ್ತಾನೆ.

ರಂಗೂನಿನ ಅಡಿಷನಲ್ ಮಾಜಿಸ್ಟ್ರೇಟರವರ ಅವ ಜೈನೂದವರು ಒಂದೇ ಮನೆಯಲ್ಲಿ ಜೂಜಾಡುತ್ತಿದ್ದರೆಂದು ಅಪಾದನೆ ಮೇಲೆ ಶೀಕ್ಷೆಗೆ ಗುರಿಮಾಡಿದರು. ಪೋಲೀಸಿನವರು ಅರ್ಧರಾತ್ರಿಯಲ್ಲಿ ಮನೆಗುಗ್ಗಿ ಅವರನ್ನು ದಸ್ತಗಿರಿಮಾಡಿ, ಅಲ್ಲಿದ್ದ ಜೂಜಾಡುವ ಸಾಮಾನುಗಳನ್ನೂ, ಸುಮಾರು 6 ಸಾವಿರ ರೂಪಾಯಿಗಳನ್ನು ಕೋರ್ಟಿಗೆ ಹಾಜರ್ಮಾಡಿದರು. ಮಾಜಿಸ್ಟ್ರೇಟರು ಮನೆಯವನಿಗೆ ೫೦೦ ರೂಪಾಯಿಯನ್ನೂ, ಇತರರಿಗೆ ೫೦ ರೂಪಾಯಿಯಂತೆ

ನ್ಯಾಯ ಕರ್ತನೇ ರಾಜ್ಯದ ನಿಲುಗಂಬ.

ನವಯುಗವೆನಿಸಿದೀ ಇಪ್ಪತ್ತನೆಯ ಶತಮಾನದಲ್ಲಿ ನ್ಯಾಯಕರ್ತರ ಸಂಖ್ಯೆಗೇನೂ ಕಡಿಮೆ ಇಲ್ಲ ಆದರೆ ನ್ಯಾಯ ಕರ್ತರ ಹೆಚ್ಚುಗೆಯಿಂದ ದೇಶದಲ್ಲಿ ನ್ಯಾಯವೂ ಹೆಚ್ಚುತ್ತಿರುತ್ತದೆಂಬುದು ಮಾತ್ರ ಬಾಯಮಾರಿಕೆ ಹೋಗಲಾಡಿಸಲು ಬಿಲ್ಲತಂದರೆ ನೀರಾತಿಕೆಯೇ ಹೆಚ್ಚುವಂತೆ ಅನ್ಯಾಯವೇ ಹೇರಳವಾಗುವುದೆಂಬುದನ್ನು ಸಾಬೀತು ಮಾಡಬೇಕಾಗಿಲ್ಲ.

ಆದರೆ ನ್ಯಾಯ ಕರ್ತರು ಹೆಚ್ಚಾದರೆ ಅನ್ಯಾಯದ ಹೆಚ್ಚುಗೆ ಏಕಾಗಬೇಕು? ನ್ಯಾಯ ಶಾಸ್ತ್ರಗಳನ್ನೆಲ್ಲ ಕಂಠಸ್ಥಮಾಡಿ ಕೇಳಿದೊಡನೆ ಹೇಳಿಬಿಡುವ ಅದ್ಭುತ ಮೇಧಾವಂತರು ದಿನೇ ದಿನೇ ಹೊರಬೀಳುತ್ತಿದ್ದಾರಲ್ಲ! ಹೀಗೆ ನ್ಯಾಯ ತಿಳಿದವರೇ ಹೆಚ್ಚುತ್ತಿರುವಾಗ ಅನ್ಯಾಯಕ್ಕೆ ಅವಕಾಶ ಉಂಟಾಗಿ ಅಧಿಕವಾಗುತ್ತ ಹೋಗುವುದೇಕೆ?

ಮನೆ ತುಂಬ ಬೇಕಾದ ಆಹಾರಸಾಮಗ್ರಿಗಳಿದೆ ಮಾಡುವವರಿದಾರೆ ಆದರೂ ಹಸಿವಿನಿಂದ ಹಲುಬುತ್ತಿರುವವರನ್ನು ನೋಡಿಲ್ಲವೆ? ಅದಕ್ಕೆ ಕಾರಣ ವೇನಿರಬಹುದು! ಸಾಮಗ್ರಿಯಿದ್ದರೂ ಮಾಡುವವರಿದ್ದರೂ ಸುಮ್ಮಾಡಿ ತಿಂದರಲ್ಲವೇ ಹಸಿವಡಗುವುದು?

ಹಾಗೆಯೇ ನ್ಯಾಯ ಕರ್ತರು ಬೇಕಾದಷ್ಟು ಹೆಚ್ಚಲಿ. ಆದರೆ ತನ್ಮೂಲಕದಿನ ಫಲವನ್ನು ನಿಷ್ಠೆಯಿಂದ ನಡತೆಯಲ್ಲಿ ತೋರಿದರಲ್ಲವೇ ಅನ್ಯಾಯವಡಗುವುದು. ನ್ಯಾಯ ಕರ್ತರ ಹೆಚ್ಚುಗೆಯಿಂದ ಲೋಕಕ್ಷೇಮವಾಗುವುದು ಅವರ ಜನ್ಮದ ಸಾರ್ಥಕ್ಯವುಂಟಾಗುವುದು!

ಲೋಕದಲ್ಲಿ ಎಲ್ಲರೂ ನ್ಯಾಯ ಕರ್ತರೆನ್ನಿಸಿಕೊಳ್ಳಲು ಆಶಿಸಬಹುದು. ಆದರೆ ಆವರೆಲ್ಲರೂ ನ್ಯಾಯ-ಕರ್ತರಾಗಲಾರರು. ಹಾಗಾಗುವುದು ಸಾಧಾರಣರ ಮಾತಿಲ್ಲ. ನ್ಯಾಯಾಧಿಪತಿಯಾಗತಕ್ಕವನು ಉತ್ತಮ ವಂಶದಲ್ಲಿ ಹುಟ್ಟಿದವನಾಗಿರಬೇಕು. ಆಸ್ತಿಕತೆ, ಧರ್ಮಭೀರುತೆ, ಸ್ಥೈರ್ಯ, ಬುದ್ಧಿ ಚಾತುರ್ಯಗಳಿಂದ ಸಂಪನ್ನನಾಗಿದ್ದು ನಿಷ್ಣಾತನಾದ ಗುರುವಿನಲ್ಲಿ ನ್ಯಾಯಶಾಸ್ತ್ರವನ್ನೆಲ್ಲಾ ದಿಸನಾಗಿರಬೇಕಲ್ಲದೆ ಅನುಭವಶಾಲಿಯಾಗಿರಬೇಕು. ಮೇಲಾಗಿ ಸ್ವಾರ್ಥ ಪಿಶಾಚಿಗಳಿಗೆ ಸಿಲುಕದ ಮಹಾಯೋಗಿಯಂತಿರಬೇಕು. ಇಂತಹವನೇ ನಿಜವಾದ ನ್ಯಾಯ ಕರ್ತನು! ಉಳಿದವರೂ "ಇಂದ್ರಗೋಪಸ್ತುಕೀಟವತ್" ಎಂಬಂತಿರುವರಲ್ಲವೆ!

ನ್ಯಾಯ ಕರ್ತನ ಕಾರ್ಯವು ಗುರುತರವಾಗಿದ್ದು. ನೋಡತ್ತ ಹೋದಂತೆ ಅದರ ಉನ್ನತಿಯಾಗಲೀ ಅವನತಿಯಾಗಲೀ ಅವನ ಧರ್ಮದ ದಂಡದ ಉಸಿರಿನಿಂದಲೇ.

ನ್ಯಾಯ ಸ್ಥಾಪನೆಯ ಕಾಲದಲ್ಲಿ ಅತಸು ಎಂತಹ ಸಂಕಟಗಳಿಗೂ ಸಿಕ್ಕಲಾಗದು. ಈ ಅನ್ಯಾಯದ ಪ್ರಪಾತದಲ್ಲಿ ಅನೇಕ ಪೇಳೆ ಸತಿ, ಸುತ, ಬಂಧು ವಿತ್ರರ ಪ್ರವಚನಗಳಿಂದ ಮೋಸ ಹೋಗುವ ಸಾಧ್ಯತೆಗಳುಂಟಾಗುವುದರಲ್ಲಿ ಸಂಶಯವಿಲ್ಲವಾದರೂ ಅವುಗಳಿಗೆ ಒಮ್ಮೆ ಸಾಕ್ಷಿ ಸಿಕ್ಕಿದನೆಂದರೆ ಅಧೋಗತಿಗೆ ಕಾರಣವಾಗುವುದು.

ಅನೇಕ ಸಮಯಗಳಲ್ಲಿ ಮಾನುಷೋಪಕರಣಗಳಿಂದಾಗಲೀ ಪತ್ಯೋಪಕರಣಗಳಿಂದಾಗಲೀ ನಿಜಾಂಶಗಳು ಹೊರಗಾಗದು. ಅಂತಹ ಸಂದರ್ಭಗಳಲ್ಲಿ ನ್ಯಾಯ ಕರ್ತನ ಅನುಸಂಧಾನ ಪ್ರತಿಭೆಯು ಅತ್ಯಪೇಕ್ಷಿತ. ಕೇವಲ ಬುದ್ಧಿ ಶಕ್ತಿಯೂ ಹಲವು ಕಡೆಗಳಲ್ಲಿ ತೃಪ್ತಿಕರವಾದ ಸತ್ಯವಾದ ಫಲಗಳನ್ನು ಕೊಡದು. ಅಂತಹ ಸಂದರ್ಭಗಳಲ್ಲಿ ದಾರಾಲೋಚನೆಗೂ ಸಹಜ ರೀತಿಯ ಸೂಕ್ಷ್ಮಗಳೂ ಅತ್ಯಗತ್ಯ. ಹಾಗಲ್ಲದೆ ಕೇವಲ ಪುಸ್ತಕದ ಪಾಂಡಿತ್ಯದ ಪ್ರದರ್ಶನ ಮಾಡುವುದರಿಂದ ಲೋಕಕ್ಕೆ ತಿಲಮಾತ್ರವೂ ಪ್ರಯೋಜನವಾಗದು. ಮೇಲಾಗಿ ಮನುಷ್ಯನ ನೈತಿಕ ಅವನತಿಗೆ ಸ್ಥೂಲ ಕಾರಣನಾಗುವುದೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಆದುದರಿಂದಲೇ ನ್ಯಾಯ ಕರ್ತನ ಕಾರ್ಯವು ನಿಸ್ಪೃಹತೆಯಿಂದಲೂ ಧರ್ಮ ಬುದ್ಧಿಯಿಂದಲೂ ಕೂಡಿರದಿದ್ದರೆ ಇಹದಲ್ಲಿ ಅಪಕೀರ್ತಿಯೂ ಪರದಲ್ಲಿ ಅಸಂಖ ಕಷ್ಟಾನುಭವವೂ ತಪ್ಪದೆಂಬುದನ್ನು ಸೂಚಿಸುವೀ

"ಮೌನಾದ್ವಾ ಯದಿವಾ ಲೋಭಾತ್
ಕ್ರೋಧಾದ್ವಾ ಯದಿವಾ ಭಯಾತ್
ಯೋನ್ಯಾಯಮನ್ಯಥಾ ಬ್ರೂತೇ
ಸಯಾತಿ ನರಕಂ ನರಃ"

ವಾಕ್ಯವನ್ನು ಮುಂದಿಡದಿರೆವು.

ಖಾದೀಬಟ್ಟೆಯನ್ನು ಸುಲಭ ಬೆಲೆಗೆ ದೊರೆಯಲು ಮಾಡುವ ವಿಧಾನ.

ಖಾದೀಬಟ್ಟೆಯು ಅಗ್ಗವಿಲ್ಲ; ಅರ್ಧ ಬೆಲೆಗೆ ಎದೇಶೀ ಬಟ್ಟೆಗಳೇ ದೊರೆಯುತ್ತವೆಂದು ಜನರು ಅನ್ನುತ್ತಾರೆ.

ಮಹಾತ್ಮ ಗಾಂಧಿಯವರ ವಿನಂತಿ:—ರಾಷ್ಟ್ರಕ್ಕಾಗಿ ನೀವು ನೂತ ವಿನಃ, ಮತ್ತು ನೀವು ನೂತ ನೂಲನ್ನು ಸಮರ್ಪಿಸಿದ ಹೊರತು, ಖದ್ದರಿನ (ಖಾದೀಬಟ್ಟೆ) ಮೌಲ್ಯವನ್ನು ನೀವು ಕಡಮೆಮಾಡಲಾರಿರಿ. ಜ್ಞಾಪಕವಿರಲಿ.

ಅಗ್ಗವೇ ಸರ್ವಸ್ವವೂ ಅಲ್ಲ. ಗ್ರಾಮಾಂತರ ವಾಸಿಗಳಾದ ನಮ್ಮ ಭಾರತೀಯ ಸಹೋದರ ಸಹೋದರಿಯರಿಗೆ ತಿನ್ನುವುದಕ್ಕೆ ಅನ್ನಕ್ಕೂ ಮಾರ್ಗವಿಲ್ಲವೆಂಬುದನ್ನು ನೆನಪಿನಲ್ಲಿಡಿರಿ.

ನೀವು ಕೊಳ್ಳುವ ಪ್ರತಿ ಒಂದು ಗಜ ಖಾದಿಯೂ ಬಡವನ ಬಾಯಿಗೆ ಒಂದು ತುತ್ತು ಅನ್ನ.

ಈ ಜನಪದಸೇವೆಯಲ್ಲಿ, ಇಲ್ಲಿಯೂ ಅಸೂಯೆಯೆ?

ಕಡ ಹುಟ್ಟಿ ಬಡವ ಕೆಟ್ಟ.

ಇಂಡಿಯಾ ದೇಶದಲ್ಲಿ ಸಾಲಾಕೊಡುವ ಕೆಲವು ಜನರು ಕಲಿಪುರುಷನ ಮಕ್ಕಳು. ಧನಪಿಶಾಚಗ್ರಸ್ತರು. ದೈತ್ಯಾಕಾರರು. ಬಾಹುಬಲರು. ದಂಡಧರರು. ಭಯೋತ್ಪಾದಕರು. ಒಂದೊಂದು ಊರಿನಲ್ಲಿ ಒಂದೊಂದು ವಿಧವಾಗಿ ಅವರಿಸಿಕೊಂಡಿದ್ದಾರೆ. ಪರಸ್ಥಳದಿಂದ ಇಬ್ಬರು ಮುವ್ವರು ಒಂದೊಂದಾವರ್ತ ಬಂದು ಸಾವಿರಾರು ಜನರು ನೆಲೆಗೊಂಡು ಇದ್ದಾರೆ. ನಾನಾ ವಿಧ ವ್ಯಾಪಾರಮಾಡುವುದು, ವಿಚಿತ್ರವಾಗಿ ಬಡ್ಡಿ ಸಾಲಾಕೊಡುವುದು ಇವೇ ಉದ್ಯೋಗ ವ್ಯವಹಾರ.

ಭಾರತೀಯನಿಗೆ ಸರ್ವಕಾಲದಲ್ಲೂ ದುಡ್ಡಿನ ಅಭಾವ ಇದ್ದೇ ಇದೆ. ಅವನ ಕೈಯಿರದ ತೌಲಗಿ ಹೋಗಲು ಒಬ್ಬ ಮಗಳು ಇದ್ದಾಳೆ. ಇವಳಿಗೆ ವರನನ್ನು ಹೊಂದಿಸುವುದಕ್ಕೆ ಹಣದ ಅಗತ್ಯ. ಸಮಯಕ್ಕೆ ಮೂಬದಲಿ ಕೊಟ್ಟ ಸ್ನೇಹಿತನ ತಗಾದೆ. ಮಾತುಕೊಟ್ಟಂತೆ ಸಾಲಶೂಲವಿಲ್ಲದ ಮನೋವ್ಯಥೆ, ಲಜ್ಜೆ, ಅಪಮಾನದ ಬಾಧೆ ಬಂದು ಕಡೆ. ಕಟ್ಟಕಡೆಗೆ ದೊಳ್ಳು ಹೊಟ್ಟೆಯ ಕಿಗ್ಗಣ್ಣಿನ ಹುಸಿನಗೆಯ ಆಸೆವಾತುಕ ಸಾಹುಕಾರನೇ ಗತಿ. ಬಡ ನೌಕರನೋ, ಸಣ್ಣವ್ಯಾಪಾರಿಯೋ, ಗಿರಣಿ ಗುಮಾಸ್ತನೋ, ಅಥವಾ ಕಷ್ಟಕ್ಕೆ ಸಿಕ್ಕಿದ ಮತ್ತೊಬ್ಬನೋ, ಅವನ ಬಲೆಗೆ ಬೀಳುತ್ತಾನೆ.

ಸುಲಭವಾಗಿ ೩೦ ರೂಪಾಯಿ ಸಾಲಾ ಬೇಕಾದಲ್ಲಿ ೫೦ ರೂಪಾಯಿಗೆ ಒಂದು ಚೂರು ಕಾಗದದ ಮೇಲೆ ಮಾಹೆಯೂನ ರೂ|| ೧ ಕ್ಕೆ ೨ ಆಣೆ ಮೇರೆ ಬಡ್ಡಿ ಕೊಡುತ್ತೇನೆಂದು ಹಣವೆನ್ನು ಕೇಳಿದೊಡನೆ ಪಾವತಿಮಾಡುತ್ತೇನೆಂದು ವಾಗ್ದಾನಮಾಡಿ ಬರೆದುಕೊಟ್ಟು ಮೊದಲ ತಿಂಗಳ ಬಡ್ಡಿಯನ್ನು ಮುಂಗಡವಾಗಿ ಕೊಟ್ಟುಬಿಟ್ಟು ಬಾಕಿ ಉಳಿದ ಮೊಬಲಗನ್ನು ತೆಗೆದುಕೊಳ್ಳಬಹುದು. ಮೊದಲ ತಿಂಗಳು ಪೂರೈಸಿದ ಕೂಡಲೆ ಎರಡನೆ ತಿಂಗಳ ಗುರ್ತಿ ತಾರೀಖಿಗೆ ಸರಿಯಾಗಿ ಇಬ್ಬರು ಮುವ್ವರು ತನ್ನ ಬಂಧುವರ್ಗದ ಸಮೇತವಾಗಿ ಸಾಲಕ್ಕೆ ಅಹುತಿಯಾದ ಬಡಪಾಯಿ ಕೆಲಸವಮಾಡುವ ಆಫೀಸು ಅಥವ ಗಿರಣಿ ಹೊರಗೆ ಹೊಂಚುಕಾದಿದ್ದು ತಗಾದೆ ಪ್ರಾರಂಭ. ತನಗೆ ಬರುವ ಅಲ್ಪವಾದ ಕೂಲಿಯಲ್ಲೆ ಸ್ವಲ್ಪ ಭಾಗವನ್ನು ಪ್ರತಿ ತಿಂಗಳಲ್ಲೂ ಕೊಲ್ಲೂ ಕೊಟ್ಟೂ ಕೃಶವಾಗುತ್ತಿರುವ ಬಾಕಿದಾರನ ಗೋಳು ಸಹಿಸಲಸಾಧ್ಯ.

ಈ ವಿಧವಾದ ಕ್ರೂರಕರ್ಮಿಗಳು ಗುಂಪು ಗುಂಪಾಗಿ ಸೇರಿ ತಮ್ಮ ಗಿರಾಕಿಗಳ ವಿಚಾರ ಮಾತನಾಡಿಕೊಂಡು ಸುಲಿದು ತಂದ ಹಣವನ್ನು ವ್ಯಾಪಾರಸಂಘದಲ್ಲಿ ವೃದ್ಧಿಪಡಿಸಿ ಸಂರಕ್ಷಣೆಮಾಡಿಕೊಳ್ಳುತ್ತಾರೆ.

ಬಡವನ ಕಷ್ಟ ಬಲ್ಲಿದನ ಇಷ್ಟ.

ಇಂಡಿಯಾದೇಶದ ವೈಸರಾಯಿಯವರಾದ ಲಾರ್ಡ್ ರೇಡಿಂಗರವರು ರಜಾದ ಮೇಲೆ ಹಿಂದೂಸ್ಥಾನದ ಕೆಲಸದ ನಿಮಿತ್ತವಾಗಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರೊಡನೆ ಮಾತನಾಡಲು ಹೋಗಿರುವರು. ಪುನಃ ವಾಪಸ್ ಬರುವತನಕ ಬಂಗಾಳಾ ಗೌರ್ನರವರಾದ ಲಾರ್ಡ್ ಲಿಟ್ಟನ್‌ರವರು ಹಂಗಾಮಿಯಾಗಿ ವೈಸರಾಯಿ ಪದವಿಯನ್ನು ನೋಡತಕ್ಕದ್ದು, ಮತ್ತು ಲಂಡನ್ನಿನ ವೆಸ್ಟ್‌ಮಿನಿಸ್ಟರ್ ಗೆಜಿಟ್ಟಿನ ರಾಜಕೀಯ ಬಾತ್ಮಿದಾರರ ಬಾತ್ಮಿಯ ಪ್ರಕಾರ ಲಾರ್ಡ್ ರೇಡಿಂಗರವರು ಪುನಃ ವೈಸರಾಯಿ ಪದವಿಗೆ ಬರಲಾರರೆಂದೂ, ಆ ಸ್ಥಾನಕ್ಕೆ ವ್ಯವಸಾಯದ ಮಿನಿಸ್ಟರ್ ರೈಟ್ ಆನರಬಲ್ ಎಡ್ವರ್ಡ್ಸ್ ರವರು ನೇಮಿಸಲ್ಪಡುವರೆಂದೂ ತಿಳಿಯಬಂದಿದೆ.